ಮೂಲ ದಾವೆ ನಂ.93/2019
ಪಿ .ಡಬ್ಲ್ಯು.1

<u>ದಿನಾಂಕಃ 23.11.2020.</u>
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
<u>ಪಾಟೀ ಸವಾಲು 5 ನೇ ಪ್ರತಿವಾದಿಯ ಪರವಾಗಿ ಶ್ರೀಮತಿ. ಪಿ.ಎನ್.ಜೆ. ವಕೀಲರಿಂದ ಃ</u>

3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ತಂದೆಯ ತಂದೆಯ ಹೆಸರು ಭೀಮರಾಯ. ನನ್ನ ತಂದೆಯ ಹೆಸರು ಭೀಮರಾಯ. ನನ್ನ ತಂದೆ ತೀರಿ ಹೋಗಿ 40 ವರ್ಷಕ್ಕಿಂತ ಜಾಸ್ತಿಯಾಯಿತು. ನಾನು 5 ರಿಂದ 6 ತಿಂಗಳ ಮಗುವಾಗಿದ್ದಾಗ ನನ್ನ ತಾಯಿ ಇನ್ನೊಂದು ಮದುವೆಯಾಗಿರುತ್ತಾರೆ. ನನ್ನ ತಾಯಿ ನನ್ನನ್ನು ಬಿಟ್ಟು ಹೋಗಿರುತ್ತಾರೆ. ನನ್ನ ತಾಯಿ ಯಾರನ್ನು ಮದುವೆಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ನನ್ನ ತಂದೆಯ ಅಣ್ಣನ ಹೆಂಡತಿಯಾದ ಹಣಮಂತಿ ಸಾಕಿರುತ್ತಾರೆ. ಸುಮಾರು 26 ವರ್ಷಗಳ ಹಿಂದೆ ನಾವು ಬಾಯಿ ಮಾತಿನಿಂದ ಪಾಲು ಮಾಡಿಕೊಂಡು ಬೇರೆಯಾಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ನನ್ನ ಪಾಲಿಗೆ ಫಲವತ್ತಾದ 3 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ಖಾತೆ ಮತ್ತು ಪಹಣಿ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ 3 ಎಕರೆ ಜಮೀನನ್ನು ನಾನು ದಿಃ 10-4-1996 ರಂದು ನನ್ನ ಸಂಸಾರದ ಅಡಚಣೆಯ ಸಲುವಾಗಿ ನೋಂದಾಯಿತ ಕ್ರಯ ಪತ್ರದ ಮೂಲಕ ಪೀರಸಾಬರವರಿಗೆ ಮಾರಾಟ ಮಾಡಿ ಸದರಿ ಜಮೀನಿನ ಸ್ವಾಧೀನವನ್ನು ಅವರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

4. ದಿಃ 02-06-1998 ರಂದು 2 ನೇ ಪ್ರತಿವಾದಿಯು ತನ್ನ ಸಂಸಾರದ ಅಡಚಣೆಗಾಗಿ ಸರ್ವೆ ನಂ. 177/1 ರಲ್ಲಿ 1 ಎಕರೆ 2 ಗುಂಟೆ ಹಾಗೂ ಸರ್ವೆ ನಂ. 178/1 ರಲ್ಲಿ 38 ಗುಂಟೆ ಜಮೀನನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದ ಆಧಾರದ ಮೇರೆಗೆ 5 ನೇ ಪ್ರತಿವಾದಿಯು ಮೇಲೆ ಹೇಳಿದ ಜಮೀನುಗಳ ಮಾಲೀಕ ಹಾಗೂ ಕಬ್ಜಾದಾರ ಎಂದರೆ ಸರಿ. ಸದರಿ ಕ್ರಯಪತ್ರ ಆದಾಗಿನಿಂದ ಮೇಲೆ ಹೇಳಿದ ಜಮೀನುಗಳ ಖಾತೆ ಮತ್ತು ಪಹಣಿ 5 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿ.

5. ಈ ದಾವೆಯನ್ನು ನಾನು 3 ಹೊಲಗಳ ಮೇಲೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಗಳ ಸರ್ವೆ

ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯಲ್ಲಿ ನನಗೆ  ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವು ಸುಮಾರು 26 ವರ್ಷಗಳಿಂದ ವಿಭಾಗವಾಗಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ 5 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿದ ಈ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಶಿರವಾಳ ಗ್ರಾಮದಲ್ಲಿ ನನ್ನ ಆಧಾರ ಕಾರ್ಡ, ಪಡಿತರ ಚೀಟಿ ಹಾಗೂ ಚುನಾವಣೆ ಗುರುತಿನ ಚೀಟಿ ಇರುವುದಿಲ್ಲ. ಬೆಂಗಳೂರಿನ ವಿಳಾಸದಲ್ಲಿ ನನ್ನ ಪಡಿತರ ಚೀಟಿ ಇದೆ. ವಡಗೇರಾದ ವಿಳಾಸದಲ್ಲಿ ನನ್ನ ಆಧಾರ ಕಾರ್ಡ ಇದೆ.

3 ನೇ ಪ್ರತಿವಾದಿಯ ವಕೀಲರು ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಹಾಗೂ ಅವರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.